**ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖಾ ನಿರ್ದೇಶಕರ ಕಛೇರಿಯ ನಡವಳಿಗಳು, ಬೆಂಗಳೂರು.**

ವಿಷಯ:- ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು "ಆಂತರಿಕ ದೂರು ನಿವಾರಣಾ ಸಮಿತಿ" ಪುನರ್ ರಚಿಸುವ ಕುರಿತು.

ಉಲ್ಲೇಖ:- 1. ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿಗಳ ಸಂಖ್ಯೆ:666-70:92ರ ಮೇಲಿನ ದಿನಾಂಕ:13.08.1997ರ ತೀರ್ಪು.

2. ಸರ್ಕಾರದ ಆದೇಶ ಸಂಖ್ಯೆ:ಮಮಇ:58:ರಾಮಾ:2002, ದಿನಾಂಕ:28.08.2002.
3. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಕಾಯ್ದೆ ಮತ್ತು ನಿಯಮಗಳು, 2013 (The Sexual Harassment of Women at Workplace (Prevention, Prohibition and Redressal Act & Rules-2013).
4. ಸರ್ಕಾರದ ಆದೇಶ ಸಂಖ್ಯೆ:ಮಮಇ:28:ರಾಮಅ:2015, ದಿನಾಂಕ:18.11.2015.
5. ಈ ಕಛೇರಿ ಆದೇಶ ಸಂಖ್ಯೆ:ಡಿಪಿಎನ್:ಎಡಿಎಂ:272:1997-98, ದಿನಾಂಕ:06.01.2018.
6. ಈ ಕಛೇರಿ ಆದೇಶ ಸಂಖ್ಯೆ:ಡಿಪಿಎನ್:ಎಡಿಎಂ:272:1997-98, ದಿನಾಂಕ:24.09.2020.

*****

**ಪ್ರಸ್ತಾವನೆ:**

ಉಲ್ಲೇಖ(1)ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿಗಳ ಸಂಖ್ಯೆ:666-70/92ರಲ್ಲಿ ದಿನಾಂಕ:13.08.1997 ರಂದು ಹೊರಡಿಸಲಾದ ಮಾರ್ಗಸೂಚಿಗಳ ಹಾಗೂ ಉಲ್ಲೇಖ (3)ರ ಕಾಯ್ದೆಯ ಅನ್ವಯ, ಕೆಲಸ ಮಾಡುತ್ತಿರುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು ಸರ್ಕಾರವು ಎಲ್ಲಾ ಇಲಾಖೆಗಳಲ್ಲಿ ದೂರು ನಿವಾರಣಾ ಸಮಿತಿಯನ್ನು ರಚಿಸುವಂತೆ ಉಲ್ಲೇಖ (2) ಮತ್ತು (4) ರಲ್ಲಿ ಆದೇಶವನ್ನು ಮಾಡಿ ಮಾರ್ಗದರ್ಶನವನ್ನು ನೀಡಿರುತ್ತದೆ.

ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಈ ಕಛೇರಿಯ ಮಟ್ಟದಲ್ಲಿ ಉಲ್ಲೇಖ (6)ರಲ್ಲಿ ದೂರು ನಿವಾರಣಾ ಸಮಿತಿಯನ್ನು ಮೂರು (3) ವರ್ಷಗಳ ಅವಧಿಗೆ ಅಥವಾ ಸಮಿತಿಯು ಪುನರ್ ರಚನೆಗೊಳ್ಳುವ ಅವಧಿಯವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪುನರ್ ರಚಿಸಲಾಗಿತ್ತು. ಸದರಿ ಸಮಿತಿಯಲ್ಲಿ ಕೆಲವು ಸದಸ್ಯರುಗಳು ನಿವೃತ್ತಿಯಾಗಿರುವುದರಿಂದ ದೂರು ನಿವಾರಣಾ ಸಮಿತಿಯನ್ನು ಈ ಕೆಳಕಂಡಂತೆ ಸದಸ್ಯರನ್ನೊಳಗೊಂಡಂತೆ ಮಹಿಳಾ ಅಧಿಕಾರಿಯ ಅಧ್ಯಕ್ಷತೆಯಲ್ಲಿ ನೇಮಕ ಮಾಡಿ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ:ಡಿಪಿಎನ್:ಎಡಿಎಂ:272:1997-98,**
**ಬೆಂಗಳೂರು, ದಿನಾಂಕ: 09.06.2023.**

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಕಾಯ್ದೆ ಮತ್ತು ನಿಯಮಗಳು, 2013 **(The sexual Harassment of Women at Workplace (Prevention, Prohibition and Redressal) Act & Rules-2013)** ಅನ್ವಯ

ಅಭಿಯೋಗ ಮತ್ತು ಸಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ ವ್ಯಾಪ್ತಿಗೆ ಸಂಬಂಧಪಟ್ಟಂತೆ ದಿನಾಂಕ: 24.09.2020ರ ಪ್ರಕಾರ ಕೆಲಸ ಮಾಡುವ ಸ್ಥಳಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ ತಡೆಯಲು "ದೂರು ನಿವಾರಣಾ ಸಮಿತಿ" ಪುನರ್ ರಚಿಸಲಾಗಿರುತ್ತದೆ. ಸದರಿ ದೂರು ನಿವಾರಣಾ ಸಮಿತಿಯ ಆದೇಶದಲ್ಲಿ ನಮೂದಿಸಿದ್ದ ಸದಸ್ಯರುಗಳ ಪೈಕಿ ಕ್ರಮಸಂಖ್ಯೆ; 02ರ ಅಧಿಕಾರಿಯಾದ ಶ್ರೀಮತಿ ಜಿ. ಮಹಾಲಕ್ಷ್ಮಿ, ಆಡಳಿತಾಧಿಕಾರಿಯವರು ಹಾಗೂ ಕ್ರಮಸಂಖ್ಯೆ; 03ರಲ್ಲಿ ನಮೂದಿಸಿರುವ ಶ್ರೀ ಕೆ.ಸಿ. ಚನ್ನಪ್ಪ, ಪ್ರಥಮ ದರ್ಜೆ ಸಹಾಯಕರು ವಯೋ ನಿವೃತ್ತಿ ಹೊಂದಿರುತ್ತಾರೆ. ಆದ್ದರಿಂದ, ಸದರಿ ಸದಸ್ಯರುಗಳ ಬದಲಿಗೆ ಅನುಕ್ರಮವಾಗಿ ಶ್ರೀಮತಿ ಜಿ. ಮಧುರ, ಆಡಳಿತಾಧಿಕಾರಿಗಳು ಮತ್ತು ಶ್ರೀ ಹೇಮಂತ್‌ಕುಮಾರ್, ಪ್ರಥಮ ದರ್ಜೆ ಸಹಾಯಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯ ನಿರ್ದೇಶಕರ ಕಛೇರಿ, ಬೆಂಗಳೂರು ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಿ ಆದೇಶಿಸಲಾಗಿದೆ.

ಮೇಲ್ಕಂಡ ಸಮಿತಿಯು ಪ್ರತಿ ತಿಂಗಳು 05ನೇ ತಾರೀಖಿನಂದು ಸಭೆ ಸೇರಿ ಯಾವುದೇ ಮಹಿಳಾ ನೌಕರರಿಂದ ಅರ್ಜಿ ಸ್ವೀಕೃತವಾದಲ್ಲಿ, **ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಕಾಯ್ದೆ ಮತ್ತು ನಿಯಮಗಳು, 2013 ಅಡಿಯಲ್ಲಿ** ಸಮಿತಿಗೆ ಕೊಡಮಾಡಲಾಗಿರುವ ಅಧಿಕಾರದನ್ವಯ ಕಾರ್ಯ ನಿರ್ವಹಿಸತಕ್ಕದ್ದು ಹಾಗೂ ಈ ಬಗ್ಗೆ ತೆಗೆದುಕೊಂಡ ನಿರ್ಣಯ / ವರದಿಯನ್ನು ಅಭಿಯೋಗ ನಿರ್ದೇಶಕರ ಕಛೇರಿಗೆ ಹಾಗೂ ಅದರ ಪ್ರತಿಯನ್ನು ಕರ್ನಾಟಕ ಮಹಿಳಾ ಆಯೋಗ, ಕಾವೇರಿ ಭವನ, 1ನೇ ಮಹಡಿ, ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಬೆಂಗಳೂರು ಇಲ್ಲಿಗೆ ಕಳುಹಿಸತಕ್ಕದ್ದು. ಒಂದು ವೇಳೆ 05ನೇ ತಾರೀಖಿನಂದು ಸಾರ್ವತ್ರಿಕ ರಜಾ ದಿವಸವಾಗಿದ್ದಲ್ಲಿ, ಮುಂದಿನ ಕಛೇರಿ ದಿವಸದಂದು ಸಭೆ ನಡೆಸತಕ್ಕದ್ದು.

9/6/2022

(ಹೆಚ್.ಕೆ. ಜಗದೀಶ್)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ನಿರ್ದೇಶಕರು(ಪ್ರ), ಬೆಂಗಳೂರು.
ದೂ: 080-22213856.

**ಸಮಿತಿಯ ಅಧ್ಯಕ್ಷರು/ಸದಸ್ಯರುಗಳಿಗೆ,**
–ಇವರಿಗೆ,

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರ ಅವಗಾಹನೆಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.
2. ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಕಾವೇರಿ ಭವನ, 1ನೆ ಮಹಡಿ, ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಬೆಂಗಳೂರು ರವರ ಮಾಹಿತಿಗಾಗಿ.
3. ಮುಖ್ಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಮಹಿಳಾ ನೌಕರರ ಮಾಹಿತಿಗಾಗಿ.
4. ಕಛೇರಿ ಪ್ರತಿ.